ಲಾವಣ್ಯಳೂ ಇತ್ತೀಚೆಗೆ ಕರಗತ ಮಾಡಿಕೊಂಡುಬಿಟ್ಟಿದ್ದಾಳೆ. "ಆಗ ಅವರು ಏನಂದಿದ್ದರು ಗೊತ್ತಾ, ಮನಸ್ಸಿಗೆ ಒದ್ದಂತೆ..." ಅಂತ ಹೇಳುತ್ತಿದ್ದವಳು ನನ್ನನ್ನು ಕಂಡೊಡನೆ ಅದೇ ವಾಕ್ಯದಲ್ಲಿ, "ನೀನು ಸಿಮಿಗೆ ಸ್ವಲ್ಪ ಆಲ್‌ಜಿಬ್ರಾ ಹೇಳಿಕೊಡ್ತೀಯಾ ಸುನೀ. ಅತ್ತೆ ಹೇಳಿಕೊಟ್ರೇ ನನಗೆ ತಲೆಗೆ ಹೋಗೋದು ಅಂತ ಪಟ್ಟು ಹಿಡಿದು ಕೂತಿದಾಳೆ ನೋಡು" ಅಂತ ಮುಂದುವರೆಸಲು ಕಲಿತುಬಿಟ್ಟಿದ್ದಾಳೆ.

★★★

ಆ ರಾತ್ರಿ ಅಮ್ಮ ನಮ್ಮ ಬೆಡ್‌ರೂಮಿನ ಬಾಗಿಲು ಬಡಿದು ಸುನೇತ್ರಾ ಇನ್ನೂ ಮನೆಗೆ ಬಂದಿಲ್ಲ ಅಂತ ಹೇಳಿದಾಗ ಭಯಪಡುವಂಥದೇನೂ ಆಗಿಲ್ಲ ಅಂತಲೇ ಮನಸ್ಸು ಸಾರಿ ನುಡಿಯುತ್ತಿತ್ತು. ಸುನೇತ್ರಳಿಗೆ ಇತ್ತೀಚೆಗೆ ಮಾಲಿನಿ ಎಂಬ ಯುವ ಕವಿಯ ಪರಿಚಯವಾಗಿತ್ತು. ಇಬ್ಬರೇ ಪ್ರವಾಸಕ್ಕೆ ಹೋಗುವುದು, ಕವಿಗೋಷ್ಠಿ—ವಿಚಾರ ಸಂಕಿರಣಗಳಿಗೆ ಹೋಗಿ ಕುಳಿತು ಬರುವುದು ಎಲ್ಲ ಶುರುವಾಗಿತ್ತು. ಆ ದಿನವೂ ನಸುಕಿಗೇ ಎದ್ದು ಬನ್ನೇರುಘಟ್ಟದ ಕಾಡು ಸುತ್ತಲು ಹೋಗಿದ್ದರು ಎಂಬುದು ಅನಂತರ ನನಗೆ ಲಾವಣ್ಯಳಿಂದ ತಿಳಿಯಿತು.

ಸುನೇತ್ರಳ ಫೋನು ಸ್ವಿಚ್ ಆಫ್ ಆಗಿತ್ತು. ರಾತ್ರಿ ಹನ್ನೆರಡಾದರೂ ಬರದೇ ಇದ್ದಾಗ ಯಾರುಯಾರದೋ ಮೂಲಕ ಮಾಲಿನಿಯ ನಂಬರ್ ತರಿಸಿಕೊಂಡೆವು. ಫೋನೆತ್ತಿದ್ದೇ ಮಾಲಿನಿ ಅಳಲು ಶುರು ಮಾಡಿದಳು. ಅವಳು ಹೇಳುತ್ತಿರುವುದನ್ನು ಅರ್ಥ ಮಾಡಿಕೊಳ್ಳಲು ನನಗೆ ತುಸು ಸಮಯವೇ ಹಿಡಿಯಿತು.

ಮಾಲಿನಿ ಹೇಳಿದ್ದಿಷ್ಟೇ. ಮುಂಜಾನೆ ಅವಳು ಮತ್ತು ಸುನೇತ್ರಾ ಬನ್ನೇರುಘಟ್ಟದ ನಿಷೇಧಿತ ಕಾಡಿನಲ್ಲಿ





